## ಶ್ರೀರಾಮಾಯಣ ದರ್ಶನಂ

ಕಲರ್ಸ್ ಕನ್ನಡ 'ನನ್ನಮ್ಮ ಸೂಪರ್ ಸ್ಟಾರ್' ಚೆನ್ನಾಗಿ ಮೂಡಿಬರುತ್ತಿದೆ. ಈಚೆಗೆ ಪ್ರಸಾರವಾದ ಅಪ್ಪು ಅಭಿನಯಕ್ಕೆ ರಾಷ್ಟ್ರಪ್ರಶಸ್ತಿ ತಂದುಕೊಟ್ಟ 'ಬೆಟ್ಟದ ಹೂವು' ಚಿತ್ರದ ಸಂಚಿಕೆಯೂ ಚೆನ್ನಾಗಿತ್ತು. ಆದರೆ ಅದರಲ್ಲಿ ಸಣ್ಣ ತಪ್ಪು ನುಸುಳಿದೆ. ಕಡೆಯಲ್ಲಿ 'ವಾಲ್ಮೀಕಿ ರಾಮಾಯಣ' ಕುವೆಂಪು ಎಂಬ ಶೀರ್ಷಿಕೆ ಹೊತ್ತ ಪುಸ್ತಕವನ್ನು ತೋರಿಸಲಾಯಿತು. ಕುವೆಂಪು ಅವರ ಕೃತಿ 'ವಾಲ್ಮೀಕಿ ರಾಮಾಯಣ' ಅಲ್ಲ 'ಶ್ರೀರಾಮಾಯಣ ದರ್ಶನಂ' ಎಂದು ಆಗಬೇಕಿತ್ತು.

—ಮಂಜುಳಾ ಎನ್.ಡಿ., ಮಂಡ್ಯ

## ಅಸಹಜ ರಿಯಾಲಿಟಿ ಶೋಗಳು!

ಟೀವಿಯ ಯಾವುದೇ ಕಾರ್ಯಕ್ರಮವಾಗಿದ್ದರೂ ಅದು ಆ ನೆಲದ ಜೈವಿಕ ಪರಿಸರವನ್ನು ಬಿಂಬಿಸುತ್ತದೆ. ಅಷ್ಟೇ ಅಲ್ಲ, ಅದು ಸಮಾಜದ ಎಲ್ಲ ವಯೋಮಾನದವರನ್ನು ಸಾಮಾನ್ಯವಾಗಿ ಸೆಳೆಯುತ್ತದೆ.

ಕನ್ನಡದ ಪ್ರಮುಖ ವಾಹಿನಿಗಳು ಈಚೆಗೆ ಮಕ್ಕಳಿಗೆ ಏನು ಕೊಡುತ್ತಿವೆ ಎಂದು ಯೋಚಿಸಿದರೆ ಮನರಂಜನೆಯ ಬದಲು ಆತಂಕವೇ ಜಾಸ್ತಿ ಎನ್ನಬಹುದು. ಪ್ರಚಲಿತ 'ರಿಯಾಲಿಟಿ ಶೋ', 'ಗ್ರ್ಯಾಂಡ್ ಫಿನಾಲೆ', 'ಚಾಂಪಿಯನ್ ಷಿಪ್' ಇತ್ಯಾದಿ ಹಣೆಪಟ್ಟಿಗಳ ಅಡಿ ತೀರ್ಪುಗಾರರ ಅಸಂಬದ್ಧ ಆಲಾಪ!

ನಿರೂಪಕರಂತೂ ಕಿರುಚುವುದೇ ತಮ್ಮ ವಿಶೇಷ ಎಂದು ಭಾವಿಸಿದಂತಿದೆ. ಕೀಳು ಹಾಸ್ಯದ ನಡುವೆ ಪುಟ್ಟ ಪುಟ್ಟ ಮಕ್ಕಳಿಗೆ ಎಲಿಮಿನೇಷನ್ ಎಂಬ ಶಿಕ್ಷೆ ನೀಡುತ್ತಾ ಅವರ ಮುಗ್ಧ ಕಣ್ಣುಗಳಲ್ಲಿ ನೀರು ತರಿಸುವುದು ನಿಲ್ಲಬೇಕು. ಮಕ್ಕಳ ಸೃಜನಶೀಲತೆಗೆ ಒತ್ತು ನೀಡುವ ಕಾರ್ಯಕ್ರಮ ರೂಪಿಸಬೇಕು. ಅವರಲ್ಲಿ ಕಥೆ, ನಾಟಕ, ಚಿತ್ರಕಲೆ, ನೃತ್ಯದಂತಹ ಕಲೆ ಉದ್ದೀಪನ ಆಗಬೇಕು. ನಿತ್ಯ ಒಂದು ಗಂಟೆ ಅಂತಹ ಕಾರ್ಯಕ್ರಮ ಪ್ರಸಾರ ಮಾಡಿದರೆ ಮಕ್ಕಳ ಅಸಹಜ ಸ್ಪರ್ಧೆ ಮತ್ತು ಅನವಶ್ಯಕ ಒತ್ತಡವನ್ನು ಸ್ವಲ್ಪವಾದರೂ ಕಡಿಮೆ ಮಾಡಬಹುದು.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಮಾದರಿ ಮದುವೆ ಆಗಲಿ

ಕೋವಿಡ್‌ನಿಂದ ಅದ್ದೂರಿ ಮದುವೆಗಳಿಗೆ ಕಡಿವಾಣ ಬಿದ್ದಿರುವ ಸಂದರ್ಭವನ್ನು ನಮ್ಮ ಎಲ್ಲ ಮನರಂಜನಾ ವಾಹಿನಿಗಳು ಬಹಳ ಚೆನ್ನಾಗಿಯೇ ಉಪಯೋಗಿಸಿಕೊಂಡು, ಪೈಪೋಟಿಗೆ ಬಿದ್ದವರಂತೆ ಅದ್ದೂರಿ ಮದುವೆಗಳ ವೈಭವವನ್ನು ಪ್ರೇಕ್ಷಕರಿಗೆ ಉಣಬಡಿಸಿದವು. ಟೀವಿಯಲ್ಲಿ ಕೆಲ ಶ್ರೀಮಂತ ಕುಟುಂಬಗಳಂತೂ ಬಡ ಕುಟುಂಬದಲ್ಲಿ ಸಂಬಂಧ ಬೆಳೆಸಿ ಎಲ್ಲಾ ಖರ್ಚುಗಳನ್ನು ತಾವೇ ಬರಿಸುವ ಧಾರಾಳತನವನ್ನು ತೋರಿದವು.

ಅದೇಕೋ ಹೆಣ್ಣು ಹೆತ್ತವರು ಬಡವರಾದರೂ ಸ್ವಾಭಿಮಾನವಿರುತ್ತದೆ ಎಂಬುದನ್ನು ಮರೆತಂತೆ ಅನಿಸುತ್ತದೆ. ಒಂದು ಮದುವೆಯ ಜವಾಬ್ದಾರಿ ಗಂಡು, ಹೆಣ್ಣು ಎಂಬ ಭೇದವಿಲ್ಲದೆ ಪೋಷಕರಿಬ್ಬರೂ ಸೇರಿ ತಮ್ಮ ಶಕ್ತ್ಯಾನುಸಾರ ಖರ್ಚು ವೆಚ್ಚಗಳನ್ನು ಸಮವಾಗಿ ಹಂಚಿಕೊಂಡು ಮಾಡಿದರೆ ಯಾರಿಗೂ ಕೀಳರಿಮೆ ಬಾಧಿಸದು. ಸಮಾಜಕ್ಕೂ ಒಂದು ಒಳ್ಳೆಯ ಸಂದೇಶ ಕೊಟ್ಟಂತಾಗುತ್ತದೆ. ಇನ್ನು ಮುಂದಾದರೂ ನಮ್ಮ ಧಾರಾವಾಹಿ ನಿರ್ದೇಶಕರು ಈ ನಿಟ್ಟಿನಲ್ಲಿ ಚಿಂತಿಸಬಹುದೆಂದು ಆಶಿಸೋಣ.

—ಪುಷ್ಪಾ ಶ್ರೀರಾಮ್, ಬೆಂಗಳೂರು

ವಾರದ ಪತ್ರ

## ಟೀವಿಯಲ್ಲಿ ಬಾವಿಕಟ್ಟೆ ಜಗಳ

ಕಲರ್ಸ್‌ನ 'ಕನ್ನಡತಿ'ಯಲ್ಲಿ ಅಜ್ಜಿ, 'ದೊರೆಸಾನಿ'ಯಲ್ಲಿ ಸತ್ಯವತಿಯ ಪಾತ್ರಗಳನ್ನು ನೋಡಿದಾಗ ಹಳೆಕಾಲದ ಅಥವಾ ಹೊಸ ಅಲೆಯ ಕೆಲವು ಚಲನಚಿತ್ರಗಳಲ್ಲಿ ಕಾಣುವ ಹೆಂಗಸರ ಬಾವಿಕಟ್ಟೆಯ ಜಗಳ ನೆನಪಿಗೆ ಬರುತ್ತದೆ. ಇವರ ಅಭಿನಯ ಅಮೋಘವಾಗಿದ್ದು, ವೀಕ್ಷಕರು ಫಿದಾ ಆಗುತ್ತಾರೆ. ಅವರ ಮಾತಿನ ಮೋಡಿ, ಬಾಡಿ ಲಾಂಗ್ವೇಜ್, ಮುಖಚಹರೆಯ ಚಲನೆ, ಬಿರುಸಾದ ನುಡಿಗಳು, ದಾಷ್ಟ್ಯದ ಮಾತುಗಳು, ಕಣ್ಣಿನಲ್ಲಿ ಬೆಂಕಿ ಕಾರುವ ಪರಿ, ಮಾತಿನಲ್ಲಿಯೇ ಎದುರಾಳಿಯನ್ನು ಮಣಿಸುವ ಗತ್ತು, ಮಾತಿನಿಂದ ಆಳವಾಗಿ ಚುಚ್ಚುವ ಬಗೆ, ಬಾವಿಕಟ್ಟೆ ಜಗಳದಲ್ಲಿ ಕಾಣುವ ಮಹಿಳೆಯರ ಉಡುಪಿನ ದೃಶ್ಯಾವಳಿ. 'ಒಲಿದರೆ ನಾರಿ ಮುನಿದರೆ ಮಾರಿ' ಗಾದೆಯನ್ನು ನೆನಪಿಗೆ ತರುತ್ತದೆ. ಅವರು ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದರೂ, ಅವರ ಪಾತ್ರ ಮಹಿಳಾ ವೀಕ್ಷಕರನ್ನು ಬೆಚ್ಚಿ ಬೀಳಿಸುತ್ತಿದೆ. ಅವರ ಪಾತ್ರ ಸತ್ಯಕ್ಕೆ ದೂರವಿರದಿದ್ದರೂ ಸ್ವಲ್ಪ ಅತಿಯಾಯಿತೇನೋ ಎಂದು ಅನಿಸುತ್ತದೆ. ಸತ್ಯವತಿಯ ಪಾತ್ರ ಎಲ್ಲೆ ಮೀರಿದಂತೆ ಕಾಣುತ್ತಿದೆ.

—ರಮಾನಂದ ಶರ್ಮಾ, ನವದೆಹಲಿ

## ಮಕ್ಕಳ ಬಾಲ್ಯ ಕಸಿಯಬೇಡಿ.

ಕೊರೊನಾದಿಂದ ಇಂದಿನ ಮಕ್ಕಳ ಪಾಠಗಳು ಆನ್‌ಲೈನ್‌ನಲ್ಲಿ ನಡೆಯುತ್ತಿವೆ. ಮೊದಲೇ ಪೋಷಕರಿಗೆ ಮಕ್ಕಳು ಓದುವುದಕ್ಕಿಂತ ಮೊಬೈಲಿನಲ್ಲಿ ಏನೇನು ನೋಡುತ್ತಾರೋ ಎನ್ನುವ ಭಯ ಇದೆ. ಅಂತಹದ್ದರಲ್ಲಿ 'ಗೀತಾ' ಧಾರಾವಾಹಿಯಲ್ಲಿ ಮಕ್ಕಳನ್ನು ಬಳಸಿ 'ವಿಜಿ' ಗೀತಾಳಿಗೆ ಪ್ರೇಮ ನಿವೇದನೆ ಮಾಡುವುದನ್ನು ತೋರಿಸಿದ್ದಾರೆ. ಮಕ್ಕಳ ಕೈಯಲ್ಲಿ ಚಪ್ಪಾಳೆ ಹೊಡೆಸಿದ್ದಾರೆ.

ಧಾರಾವಾಹಿಗಳಲ್ಲಿ ಏನಾದರೂ ಭಿನ್ನವಾಗಿ ತೋರಿಸಬೇಕು ಅಂತ ಎಳೆಯ ಮಕ್ಕಳನ್ನು ಲವ್ ದೃಶ್ಯಗಳಲ್ಲಿ ಬಳಸಿಕೊಳ್ಳುತಿದ್ದಾರೆ. ಇಂತಹ ದೃಶ್ಯ ಮಕ್ಕಳ ಮನಸ್ಸಿನ ಮೇಲೆ ಎಂತಹ ಪರಿಣಾಮ ಬೀರುವುದೆಂದು ಧಾರಾವಾಹಿ ಮಾಡುವವರಿಗೆ ಅರಿವಿಲ್ಲವೆ? ಕೆಲ ಪೋಷಕರು ತಮ್ಮ ಮಕ್ಕಳು ಟೀವಿಯಲ್ಲಿ ಬಂದರೆ ಜೀವನ ಸಾರ್ಥಕ ಎನ್ನುವ ಹಾಗೆ ಆಡುತ್ತಾರೆ. ಮಕ್ಕಳನ್ನು ಮಕ್ಕಳ ಹಾಗೆ ಇರಲು ಬಿಡಿ.

—ಜಯಂತಿ ಶಾಸ್ತ್ರಿ, ಮೈಸೂರು

## ತಿರುವು ಮರುವು!

ಕಲರ್ಸ್ 'ಕನ್ನಡತಿ' ನಿರ್ದೇಶಕರು ತಮ್ಮ ಕತೆಯನ್ನು ಸರಿದಾರಿಗೆ ತರಲು ಹಲವಾರು ತಿರುವು ತರುತಿದ್ದಾರೆ. ಆ ಯತ್ನವನ್ನು ನೇರವಾಗಿ ಹೇಳುವುದರಲ್ಲಿ ಸ್ವಲ್ಪ ಎಡವಿದ್ದಾರೆ ಎಂದು ಅನ್ನಿಸುತ್ತೆ. ವರುಧಿನಿ ಕೊಟ್ಟ ಗಿಫ್ಟ್ ಇನ್ನೂ ಬೇರೆ ರೀತಿಯಲ್ಲಿ ತೋರಿಸಬಹುದಿತ್ತು. ಕತ್ತು ಮುರಿದ ಬೊಂಬೆ ಕೊಡುವ ಮತ್ತು ವರುವಿನ ಅಸಮಾಧಾನವನ್ನು ಕೆಟ್ಟದಾಗಿ ತೋರಿಸುವ ಬದಲು, ಹರ್ಷನ ಹುಡುಗಿಯ ಪರಿಚಯ ಮಾಡಿಕೊಂಡ ಮೇಲೆ ತಿಳಿಸಬಹುದಿತ್ತು. ಈಗಾಗಲೇ ಹರ್ಷ ತನ್ನ ಅಭಿಪ್ರಾಯವನ್ನು ಮೂರ್ನಾಲ್ಕು ಬಾರಿ ವರುವಿಗೆ ನೇರವಾಗಿ ತಿಳಿಸಿದ್ದಾನೆ. ಈಗ ಹರ್ಷನ ಮುಂದೆ ಈ ರೀತಿ ಮಾಡುವುದು ಸರಿಯಲ್ಲ.

—ನಾಡಿಗ್ ರಾಮಚಂದ್ರ, ಬೆಂಗಳೂರು

ವೈದ್ಯನೂ ಸುಳ್ಳುಗಾರ: 'ಕನ್ನಡತಿ' ದುಷ್ಟರಿಗೆ ಕಾಲ ಎನ್ನುವುದನ್ನು ಮತ್ತೆ ಸಾಬೀತು ಮಾಡಿದೆ. ಇದು ಇಂದಿನ ಪೀಳಿಗೆಯನ್ನು ತಪ್ಪು ದಾರಿಗೆ ತಳ್ಳುತ್ತಿದಿಯಾ? ಅಮ್ಮಮ್ಮ, ಆದಿ, ತಾಪ್ಸಿ, ಹರ್ಷ ಎಲ್ಲರೂ ಜಾಣ ದಡ್ಡರು. ಬರೀ ಖಳನಟಿ–ನಟರನ್ನು ಕ್ರೌರ್ಯದಿಂದ ವಿಜೃಂಭಣೆ ಮಾಡುತ್ತಿದ್ದಾರೆ. ವೈದ್ಯರನ್ನು ದೇವರು ಎಂದು ನಂಬುವ ಪರಂಪರೆ ನಮ್ಮದು. ಹೀಗಿರುವಾಗ ಡಾಕ್ಟರ್ ಬಾಯಲ್ಲಿ ಸುಳ್ಳು ನಾಟಕ ಆಡಿಸುತ್ತಿರುವುದು ಸರಿ ಅಲ್ಲ.

—ಮೇಘನಾ ರಘುನಂದನ್

## ಭಿನ್ನ ಕತೆ ಸಿಗಬಹುದೇ?

ಸ್ಟಾರ್ ಸುವರ್ಣದಲ್ಲಿ ಸಂಜೆ 6.30ಕ್ಕೆ ಪ್ರಸಾರವಾಗುವ 'ರಾಧೆ ಶ್ಯಾಮ' ಪ್ರಾರಂಭವಾದಾಗ ಬೇರೆ ಧಾರಾವಾಹಿಗಿಂತ ಭಿನ್ನ ಎಂದೆನಿಸಿತ್ತು. ಹಾಗಾಗಿ ನೋಡಲು ಪ್ರಾರಂಭಿಸಿದೆ. ಸೊಸೆಯನ್ನು ಮನೆಯ ಮಹಾಲಕ್ಷ್ಮಿ ಎಂದು ಭಾವಿಸುವ ಸಂಸ್ಕೃತಿ ನಮ್ಮದು. ಇದರಲ್ಲಿ ಮನೆಯ ಎರಡನೇ ಸೊಸೆ ಗೋಡೌನ್‌ಗೆ ಬೆಂಕಿ ಹಚ್ಚಿ 'ಸುಟ್ಟು ಹೋಗಿದೆ' ಎಂದು ಹೇಳುತ್ತಾಳೆ.

ಈ ಕುಕೃತ್ಯದಲ್ಲಿ ಆಕೆಯ ಗಂಡನ ಸಹಕಾರವೂ ಇರುತ್ತದೆ. ಹೆಚ್ಚಿನ ಎಲ್ಲ ಧಾರಾವಾಹಿಗಳಲ್ಲಿ ಇಂತಹ ಖಳ ಪಾತ್ರಗಳು ಇದ್ದೇ ಇರುತ್ತವೆ. ಇದರ ಹೊರತಾದ ಕತೆಯನ್ನು ನೋಡುವ ಭಾಗ್ಯ ನಮಗೆ ಸಿಗುವುದೇ?

—ಕೆ.ಎಸ್. ಸವಿತ, ಬೆಂಗಳೂರು